# KARNATAKA STATE LAW UNIVERSITY

## Navanagar, HUBLI – 580 025

**Accredited with 'A' Grade by NAAC**

Phone/Fax: 0836-2323151, 2222391


No. KSLU/2020-21/ 294 Date: 28-08-2020

## ಸುತ್ತೋಲೆ

**ವಿಷಯ :** **ದಿನಾಂಕ 25-09-2020 ಹಾಗೂ 05-10-2020 ರಂದು ಮೂರು ವರ್ಷದ, ಐದು ವರ್ಷದ ಅಂತಿಮ ಮತ್ತು ಇಂಟರ್ ಮಿಡೀಯೆಟ್, ಮತ್ತು ವಿವಿಧ ಕಾನೂನು ಪದವಿ ಪರೀಕ್ಷೆಗಳನ್ನು ಮುಂದೂಡಿದ ಕುರಿತು.**

**ಉಲ್ಲೇಖ:** **ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 28-08-2020**

ಕೋವಿಡ್-19 ರ ಹಿನ್ನೆಲೆ ಮತ್ತು ವಿವಿಧ ವಿದ್ಯಾರ್ಥಿ ಸಂಘಟನೆಗಳ ಮನವಿಯ ಮೇರೆಗೆ ಮಾನ್ಯ ಶ್ರೀ. ಜೆ. ಸಿ. ಮಾಧುಸ್ವಾಮಿ ಕಾನೂನು ಸಂಸದಿಯ ವ್ಯವಹಾರ ಮತ್ತು ಶಾಸನ ಹಾಗೂ ಸಣ್ಣ ನೀರಾವರಿ ಇಲಾಖೆ, ಹಾಗೂ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:26-08-2020 ರಂದು ಬೆಳಿಗ್ಗೆ 11.00 ಘಂಟೆಗೆ ಕೊಠಡಿ ಸಂಖ್ಯೆ 316, 3 ನೇ ಮಹಡಿ, ವಿಧಾನ ಸೌಧದಲ್ಲಿ ಜರುಗಿದ ಸಭೆಯಲ್ಲಿ ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ) ಹಾಗೂ ಬೆಂಗಳೂರು ವಲಯದ ಮಹಾವಿದ್ಯಾಲಯಗಳ ಪ್ರಾಚಾರ್ಯರು ಭಾಗವಹಿಸಿದ್ದರು.

ಸದರಿ ಸಭೆಯಲ್ಲಿ ಮೇಲಿನ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ, ಆಫ್‌ಲೈನ್ ತರಗತಿಗಳನ್ನು ನಡೆಸಿದ ನಂತರ ಪರೀಕ್ಷೆಗಳ ದಿನಾಂಕವನ್ನು ನಿಗದಿಪಡಿಸುವಂತೆ ನಿರ್ಧರಿಸಲಾಯಿತು.

ಈ ಹಿನ್ನೆಲೆಯಲ್ಲಿ ಈಗಾಗಲೇ ದಿನಾಂಕ: 25-09-2020 ರಂದು ತಾತ್ಕಾಲಿಕವಾಗಿ ನಿಗದಿಪಡಿಸಿದ್ದ ಮೂರು ಹಾಗೂ ಐದು ವರ್ಷದ ಅಂತಿಮ ಕಾನೂನು ಪರೀಕ್ಷೆಗಳನ್ನು ಹಾಗೂ 05-10-2020 ರಿಂದ ನಿಗದಿಪಡಿಸಿದ್ದ ಇಂಟರ್ ಮಿಡೀಯೆಟ್ ಮತ್ತು ವಿವಿಧ ಕಾನೂನು ಪದವಿ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಮುಂದುವರೆದು, ಸದರಿ ಪರೀಕ್ಷೆಗಳನ್ನು ಆಫ್‌ಲೈನ್ ಮೂಲಕ (Pen & Paper) ನಡೆಸುವ ದಿನಾಂಕಗಳನ್ನು ನಂತರ ಪ್ರಕಟಿಸಲಾಗುವುದು.

ಈ ವಿಷಯವನ್ನು ಉಪನ್ಯಾಸಕರು, ವಿದ್ಯಾರ್ಥಿಗಳು, ಪಾಲಕರು/ಪೋಷಕರು ಹಾಗೂ ಸಂಬಂಧಿಸಿದ ಸಿಬ್ಬಂದಿಗಳ ಗಮನಕ್ಕೆ ತರುವಂತೆ ತಿಳಿಸಲಾಗಿದೆ.

ಕುಲಸಚಿವರು (ಮೌಲ್ಯಮಾಪನ)

ಗೆ,

1. ಪ್ರಾಂಶುಪಾಲರು, ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ
2. ನಿರ್ದೇಶಕರು. ಕಾನೂನು ಶಾಲೆ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ